

ಚಾನೆಲ್‌ಗಳು ಜನ್ಮ ತಳೆದವು. ಹಣ ಹರಿದಾಡತೊಡಗಿದ್ದೇ ಕೇಬಲ್ ಮಾಫಿಯಾ ಆರಂಭವಾಯಿತು. ಅವರ ಜನಸಂಪರ್ಕ ಜಾಲವು ಬೆಳೆದಂತೆಲ್ಲ ಹಲವಾರು ಜನ ಅಲ್ಲಿಂದ ರಾಜಕೀಯಕ್ಕೆ ಧುಮುಕಿ ಸ್ಥಳಿಯ ಆಡಳಿತದ ಪಾಲುದಾರರಾದ ವಿದ್ಯಮಾನಗಳೂ ಜರುಗಿದವು. ಅತಿ ಹೆಚ್ಚು ಟೀವಿ ನೋಡುವ ಜನರನ್ನು 'ಕೌಚ್ ಪೊಟ್ಯಾಟೋಸ್' ಎನ್ನುವುದು ಶುರುವಾಗಿ ಇಂಥ ಪೊಟ್ಯಾಟೋಗಳ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತ, ಸಪೂರವಾಗಿದ್ದ ಇವು ಕಾಲಕ್ರಮೇಣ ಪಂಪ್ಕಿನ್ ಗಾತ್ರ ತಳೆದು ಬೊಜ್ಜಿನ ಕಾಯಿಲೆಗಳು ಶುರುವಾದವು.

ಕೇಬಲ್ ವ್ಯವಸ್ಥೆಗೆ ನಾವೆಲ್ಲ ಚೆನ್ನಾಗಿ ಹೊಂದಿಕೊಂಡ ಮೇಲೆ ದಿನಾ ಸಂಜೆ ನಮ್ಮ ಇಡೀ ವಠಾರದ ಅಂಗಳ ಬಿಕೋ ಎನ್ನುತ್ತಿತ್ತು. ಅಕಸ್ಮಾತ್ ಸಂಜೆಯ ಸಿನಿಮಾ ಹೊತ್ತಲ್ಲಿ ವಠಾರದ ಹೆಂಗಸರೆಲ್ಲ ಹೊರಗಡೆ ಬಂದು ಪರಸ್ಪರ ಹರಟುತ್ತ ನಿಂತಿದ್ದಾರೆಂದರೆ ಅದು ನಿಸ್ಸಂಶಯವಾಗಿಯೂ ಕರೆಂಟು ಹೋಗಿದೆಯೆಂಬ ಸಂದೇಶ ನೀಡುತ್ತಿತ್ತು. ಅದೇ ಮೊದಲಾದರೆ ಓಣಿಯ ಹೆಂಗಸರೆಲ್ಲ ಯಾರದೋ ಮನೆಯ ಜಗುಲಿಯಲ್ಲಿ ಕುಳಿತು ಹರಟೆಯಲ್ಲಿ ಕಾಲಕ್ಷೇಪ ಮಾಡುತ್ತಿದ್ದರು. ಒಂದು ಮಶೀನು ಬಂದು ಮನುಷ್ಯರ ಮನುಷ್ಯರ ನಡುವೆ ಇದ್ದ ಸಾವಯವ ಸಂಬಂಧವನ್ನು ಸದ್ದಿಲ್ಲದೆ ಚಿವುಟಿ ಹಾಕಿ, ಎಲ್ಲರೂ ತನ್ನನ್ನೇ ನೋಡುತ್ತ ಕೂರುವಂಥ ಸನ್ನಿವೇಶವನ್ನು ತಂದಿಟ್ಟು ಬಿಟ್ಟಿತು.

ಇವತ್ತು ನಾವು ಟೀವಿ ಬಿಟ್ಟು ಕದಲದಂತೆ ಅಡುಗೆ, ಆಹಾರ, ಪ್ರವಾಸ, ಭಕ್ತಿ, ಅಧ್ಯಾತ್ಮ, ಕಾರ್ಟೂನು, ಸಿನಿಮಾ, ಕ್ರೀಡೆ, ರಾಜಕೀಯ, ವಾರ್ತೆ, ಜೀವನಶೈಲಿ, ಜ್ಯೋತಿಷ್ಯ, ಸಾಹಸ... ಹೀಗೆ ಎಲ್ಲದಕ್ಕೂ ಪ್ರತ್ಯೇಕ ಚಾನೆಲ್ಲುಗಳು ಬಂದಿವೆ. ಊರಿಗೊಂದು ಟೀವಿ ಇದ್ದುದು ಓಣಿಗೊಂದಾಗಿ, ಮುಂದುವರೆದು ಮನೆಗೊಂದಾಗಿ, ಈಗ ರೂಮಿಗೊಂದೊಂದು ಇದ್ದುಬಿಡಲಿ ಪ್ರತ್ಯೇಕವಾಗಿ ಎಂಬಂಥ ವಾತಾರಣ ಬಂದಿದೆ. ಟೀವಿಯ ಸ್ವರೂಪದಲ್ಲಾದರೂ ಎಷ್ಟು ಬದಲಾವಣೆಯಾಗಿದೆ ನೋಡಿ – ಡೋಮ್ ಟೀವಿ ಹೋಗಿ ಎಲ್‌ಸಿಡಿ ಬಂದು, ಅಲ್ಲಿಂದ ಎಲ್‌ಇಡಿ ಪರದೆಯಾಗಿ, ನಂತರ ಸ್ಮಾರ್ಟ್ ಕಾಲವೂ ಮುಗಿದು ಈಗ ಫ್ಲ್ಯಾಟ್ರಾನ್ ಟೀವಿಗಳು ಬಂದಿವೆ. ಪರದೆ ಮೇಲೆ ಕಾಣಿಸುತ್ತಿರುವುದು ಹಗ್ಗವೋ ಹಾವೊ ಎಂದು ಗೊಂದಲಕ್ಕೊಳಗಾಗುವಷ್ಟು ಮಸುಕು ಮಸುಕಾದ ಬಿಂಬಗಳನ್ನು ಮೂಡಿಸುತ್ತಿದ್ದ ಪರದೆಗಳ ಜಾಗದಲ್ಲಿ ಇರುವೆಯ ಕಾಲ ಮೇಲಿನ ಕೂದಲೆಳೆಯಂಥ ರಚನೆಗಳನ್ನೂ ಕರಾರುವಾಕ್ಕಾಗಿ ತೋರುವ ಎಚ್‌ಡಿ ಪರದೆಗಳು ಬಂದಿವೆ. ಹಿಂದೆಂದೋ ಪ್ರಸಾರವಾದ ಕಾರ್ಯಕ್ರಮವನ್ನು ಇಂದೂ ನೋಡಲಿಕ್ಕೆ ಅವಕಾಶವಿರುವಂಥ ವ್ಯವಸ್ಥೆಯೂ ಬಂದಿದೆ. ಈಗ ಅಲ್ಲೆಲ್ಲೋ ನಡೆಯುತ್ತಿರುವುದನ್ನು ಅದು ನಡೆಯುತ್ತಿರುವಂತೆಯೇ ನೀವು ಕುಳಿತಲ್ಲಿಯೇ ನೇರಪ್ರಸಾರದಲ್ಲಿ ತೋರಿಸುವ ವ್ಯವಸ್ಥೆಯೂ ಬಂದಾಗಿದೆ. ನಿನ್ನೆಯ ಸಂಗತಿಯಾಯ್ತು, ಇಂದಿನ ಸಂಗತಿಯೂ ಆಯ್ತು. ಪುಣ್ಯಕ್ಕೆ ನಾಳೆಯನ್ನು ಇಂದೇ ತೋರಿಸುವ ತಂತ್ರಜ್ಞಾನ ಬಂದಿಲ್ಲವಾಗಿ ನಮ್ಮ ತಲೆಗಳಿನ್ನೂ ನಮ್ಮ ಹೆಗಲ ಮೇಲೇ ಇವೆ.

ಟೀವಿ ಬರೀ ಕೆಟ್ಟದ್ದನ್ನೇ ಮಾಡಿದೆ ಅಂತಲೂ ಹೇಳಲಾಗದು. ಆರಂಭದಲ್ಲಿ ಭಾರತದಲ್ಲಿ ಟೀವಿಯನ್ನು ಒಂದು ಸಮಗ್ರ ಶೈಕ್ಷಣಿಕ ಮಾಧ್ಯಮವಾಗಿ ಬೆಳೆಸುವ ಪ್ರಯತ್ನಗಳಾದವು. 'ಒಂದು ಒಳ್ಳೆಯ ಚಾನೆಲ್ ಒಬ್ಬ ಒಳ್ಳೆಯ ಪತ್ರಕರ್ತನಂತೆ ನಾವಿರುವ ಜಗತ್ತನ್ನು ಮತ್ತಷ್ಟು ಉತ್ತಮಪಡಿಸಬಲ್ಲುದು' ಎಂಬ ನಂಬಿಕೆಯೊಂದಿಗೆ ಫೋರ್ಡ್ ಫೌಂಡೇಶನ್, ಯುಜಿಸಿ, ಇಸ್ರೋದಂಥ ಸಂಸ್ಥೆಗಳೂ ದೂರದರ್ಶನದ ಜತೆ ಕೈಜೋಡಿಸಿದವು. ಕಂಟ್ರಿವೈಡ್ ಕ್ಲಾಸ್‌ರೂಮ್, ಸೆಟಲೈಟ್ ಇನ್‌ಸ್ಟ್ರಕ್ಷನಲ್ ಟೆಲಿವಿಷನ್ ಎಕ್ಸ್‌ಪೆರಿಮೆಂಟ್, ಕೃಷಿದರ್ಶನ್, ಕ್ವೆಸ್ಟ್, ಲಿವಿಂಗ್ ಆನ್ ದ ಎಡ್ಜ್, ಟರ್ನಿಂಗ್ ಪಾಯಿಂಟ್‌ನಂಥ ಕಾರ್ಯಕ್ರಮ ಸರಣಿಗಳು ಪ್ರಸಾರವಾದವು. ಭೀಷ್ಮ ಸಹಾನಿಯವರ 'ತಮಸ್', ಶ್ರೀಲಾಲ್ ಶುಕ್ಲಾ ಅವರ 'ರಾಗ್ ದರ್ಬಾರಿ', ಭೈರಪ್ಪನವರ 'ಗೃಹಭಂಗ'ದಂಥ ಕಾದಂಬರಿಗಳು ಧಾರಾವಾಹಿಗಳಾಗಿ ಪ್ರಸಾರವಾದವು. ಅಂತರರಾಷ್ಟ್ರೀಯ ಖ್ಯಾತಿಯ ಪ್ರತಿಭಾವಂತ ನಿರ್ದೇಶಕರಾದ